

‘ಜಿಮ್ಮಿ ಸಿಗ್ತೀಯಾ?’ ಅಂತಾ ಕೇಳಿದಾಗ ನಾನಿನ್ನೂ ಹಲದಿರಾಮ್ ಎದುರು ಮುಸ್ಸಂಜೆ ಬೆಳಕಿನಲ್ಲಿ ಹಾಡು ಕೇಳುತ್ತಾ ಬಸ್ಸಿಗಾಗಿ ಕಾಯುತ್ತಿದ್ದೆ. ಹಲದಿರಾಮ್ ಎದುರು ಗೆಳೆಯನಿಗಾಗಿ ಕಾಯುವ ಗೆಳತಿ, ಜಗಳ ಮಾಡಿ ರಾಜಿಯಾಗಲು ಬಂದ ಜೋಡಿಗಳು, ಬಾಯಿಚಪಲಕ್ಕೆ ತಿನ್ನಲು ಬರುವ ಮದುಕರು... ಹಲದಿರಾಮ್ ಎದುರಿನ ಪಾನ್ ಸುಪಾರಿ ಅಂಗಡಿಯವ, ನೀರು, ಗುಟ್ಕಾ ಇಟ್ಟುಕೊಂಡ ಹುಡುಗ, ಸೈಕಲ್ ರಿಕ್ಷಾಗಳು, ಇತ್ತ ಫುಟ್‌ಪಾತಿನಲ್ಲಿ ಮರದ ನೆರಳಿನಲ್ಲಿ ಮಲಗಿದ ಹೆಲ್ಮೆಟ್ ಮಾರುವವ, ಮೊಬೈಲ್ ಕರೆ ಅಟೆಂಡ್ ಮಾಡಲು ನಿಂತುಕೊಂಡ ಬೈಕುಗಳು, ಕಾರುಗಳು. ಸಣ್ಣ ಸರ್ವೀಸ್ ರಸ್ತೆಯಲ್ಲಿ ಒತ್ತಿಕೊಂಡೇ ರಣಸಂಕಟದಲ್ಲಿ ಬರುವ ಹೋಗುವ ಗಾಡಿಗಳು, ಹಲದಿರಾಮ್ ಒಳಗೆ ಹೋದವರನ್ನು ಕರೆದೊಯ್ಯಲು ಕಾಯುತ್ತ ನಿಂತಿರುವ ಗಾಡಿಗಳು ಕುಯ್ಯೋ ಮುರ್ರೋ ಎನ್ನುತ್ತ ಓಡುವ ಡಿಟಿಸಿ ಬಸ್ಸುಗಳು... ಬಿಡುವಿಲ್ಲದ ಬದುಕು ಈ ರಸ್ತೆಯಲ್ಲಿಯೇ ಕಾಲುಚಾಚಿ ಕುಳಿತಿದೆಯೇನೋ ಎನ್ನಬೇಕು.

ನಾನು ಹಿಡಿಯುವ ಚಾರ್ಟರ್ಡ್ ಬಸ್ಸು ಆರ್.ಕೆ. ಪುರಂ ಬಿಟ್ಟು ಹಯಾತ್ ಹೋಟೆಲಿನೆದುರಿಂದ, ರಿಂಗ್ ರೋಡ್ ಹಿಡಿಯಬೇಕಾದರೆ ಅರ್ಧ ಗಂಟೆ ತೆಗೆದುಕೊಳ್ಳುತ್ತಿತ್ತು. ಸಂಜೆ ಆರರ ವಿಪರೀತ ಟ್ರಾಫಿಕ್ ಜಾಮ್. ಹಯಾತ್ ಹೋಟೆಲಿನ ಟಿ ಜಂಕ್ಷನ್‌ನಲ್ಲಿ ಸಿಕ್ಕಿಹಾಕಿಕೊಂಡು ವಾಹನಗಳು ಮೊಸಳೆಯಂತೆ ಇಂಚಿಂಚಾಗಿ ತೆವಳಬೇಕು, ಹಾಗಿರುತ್ತದೆ ಸಾರಿಗೆ. ಈ ನಮ್ಮ ಬಸ್ಸು ಅದೂ ಮೋತಿಬಾಗ್ ಸೇತುವೆ ಕೆಳಗೆ ಹೋಗಿ ಒಂದು ಯು ಟರ್ನ್ ತೆಗೆದು ಮತ್ತೆ ನನ್ನತ್ತ ಬರಲು